# ಕರ್ನಾಟಕ ವಿಧಾನಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **361** |
| **ಸದಸ್ಯರ ಹೆಸರು** | **ಶ್ರೀ ಪ್ರತಾಪ್ ಸಿಂಹ ನಾಯಕ್.ಕೆ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **10.03.2025** |
| **ಉತ್ತರಿಸುವ ಸಚಿವರು** | **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಎನ್.ಎಚ್.ಎಮ್. ಆಯುಷ್ ವಿಭಾಗದಲ್ಲಿ ಖಾಯಂ ಹಾಗೂ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು ಮತ್ತು ಅವರಿಗೆ ಪ್ರಸ್ತುತ ನೀಡುತ್ತಿರುವ ವೇತನ ಮತ್ತು ಭತ್ಯೆಗಳ ವಿವರಗಳೇನು; | ರಾಷ್ಟ್ರೀಯ ಆರೋಗ್ಯ ಅಭಿಯಾನದ ಆಯುಷ್ ಕಾರ್ಯಕ್ರಮದಡಿಯಲ್ಲಿ, ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಮತ್ತು ಪ್ರಸ್ತುತ ವೇತನ ಭತ್ಯೆಯ ವಿವರಗಳನ್ನು **ಅನುಬಂಧ-1ರಲ್ಲಿ** ನೀಡಲಾಗಿದೆ. |
| ಆ) | ಕಳೆದ 03 ವರ್ಷಗಳಲ್ಲಿ ಎನ್.ಎಚ್.ಎಮ್. ಆಯುಷ್ ವಿಭಾಗಕ್ಕೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ದೊರೆತಿರುವ ಅನುದಾನ ಎಷ್ಟು; (ವಿವರ ನೀಡುವುದು) | ಕೇಂದ್ರ ಪುರಸ್ಕೃತ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರ 60% ಮತ್ತು 40% ಅನುಪಾತದಲ್ಲಿ ಕಳೆದ 3 ವರ್ಷಗಳ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದ ಆಯುಷ್ ಕಾರ್ಯಕ್ರಮ ವಿಭಾಗಕ್ಕೆ ಅನುಮೋದನೆಯಾಗಿರುವ ಅನುದಾನದ ವಿವರಗಳನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ. |
| ಇ) | ಎನ್.ಎಚ್.ಎಮ್ ಆಯುಷ್ ವಿಭಾಗದಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಯಕ್ರಮ ಅಧಿಕಾರಿಗಳ ನೇಮಕಾತಿ ಮಾನದಂಡಗಳು ಅವರು ನಿರ್ವಹಿಸುತ್ತಿರುವ ಕರ್ತವ್ಯಗಳು ಯಾವುವು; ಅವರಿಗೆ ನೀಡುತ್ತಿರುವ ವೇತನ ಮತ್ತು ಭತ್ಯೆಗಳ ವಿವರಗಳನ್ನು ಒದಗಿಸುವುದು: | ಸರ್ಕಾರದ ಆದೇಶ ಸಂಖ್ಯೆ: ಆಕುಕ 303 ಪಿಐಎಂ 2012, ದಿನಾಂಕ: 06-08-2012ರಲ್ಲಿ ಆಯುಷ್ ಇಲಾಖೆಯಲ್ಲಿ ಯೋಜನಾ ಘಟಕವನ್ನು (PMU) ಮತ್ತು ಆಡಿಟ್ ಸೆಲ್‌ನ್ನು ಸ್ಥಾಪಿಸಲು ಸರ್ಕಾರದ ಆದೇಶದ ಸಂಖ್ಯೆ: ಆಕುಕ 153 ಪಿಐಎಂ 2012, ದಿನಾಂಕ:21-02-2012 ರಲ್ಲಿ ಕೆಲವು ಷರತ್ತುಗೊಳಪಟ್ಟು ಸೃಜಿಸಲಾದ ಹುದ್ದೆಗಳಲ್ಲಿ ಕಾರ್ಯಕ್ರಮ ಅಧಿಕಾರಿಗಳು (ಎನ್.ಆರ್.ಹೆಚ್.ಎಂ) ಹುದ್ದೆಯನ್ನು ಸೃಜಿಸಿ, ಈ ಕೆಳಕಂಡಂತೆ ನೇಮಕಾತಿ ಕಾರ್ಯವಿಧಾನವನ್ನು ನಿಗದಿಪಡಿಸಲಾಗಿದೆ.<br><br>**ನೇಮಕಾತಿ ವಿಧಾನ :**<br>"ಆಯುಷ್ ಇಲಾಖೆಯ ವೈದ್ಯರು ದರ್ಜೆ-2 ಹುದ್ದೆಯಿಂದ ನಿಯೋಜನೆ ಅಥವಾ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯ ತತ್ಸಮಾನ ಶ್ರೇಣಿಯ ಅಧಿಕಾರಿಗಳ ನಿಯೋಜನೆ ಅಥವಾ ಇತರೆ ಇಲಾಖೆಯ ತತ್ಸಮಾನ ಶ್ರೇಣಿಯ ಅಧಿಕಾರಿಗಳ ನಿಯೋಜನೆ". |

| | | |
|---|---|---|
| | | **ನಿರ್ವಹಿಸುತ್ತಿರುವ ಕರ್ತವ್ಯಗಳು :**<br>1. ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು, ಶಿವಮೊಗ್ಗ ಮತ್ತು ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕಾಲೇಜು, ಮೈಸೂರು ಇಲ್ಲಿನ ಪ್ರತಿ ವರ್ಷದ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಪ್ರತಿ ತಿಂಗಳು ಪ್ರಗತಿಯ ಪರಿಶೀಲನೆ ಮಾಡಿ ಪ್ರಾಚಾರ್ಯರಿಂದ ಮಾಹಿತಿಗಳನ್ನು ಪಡೆದು ಜಂಟಿ ನಿರ್ದೇಶಕರಿಗೆ ವರದಿ ಮಾಡುವುದು. ಎನ್.ಹೆಚ್.ಎಂ. ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಕ್ರಿಯಾ ಯೋಜನೆ (ಪಿ.ಐ.ಪಿ) ಸಿದ್ಧಪಡಿಸುವುದು, ಕಾರ್ಯಕ್ರಮಗಳ ಅನುಷ್ಠಾನ, ಅಭಿಯಾನ ನಿರ್ದೇಶಕರು, ಎನ್.ಹೆಚ್.ಎಂ. ಇವರಿಗೆ ಅಗತ್ಯ ಮಾಹಿತಿಗಳು, ಆಯುಷ್ ಪದ್ಧತಿಗಳಿಗೆ ಸಂಬಂಧಿಸಿದಂತೆ ಅಂಕಿಅಂಶಗಳು / ಮಾಹಿತಿ ಕ್ರೂಢೀಕರಣ, ಸರ್ಕಾರದ ಮತ್ತು ವಿವಿಧ ಹಂತಗಳಲ್ಲಿ ನಡೆಯುವ ಎಲ್ಲಾ ಸಭೆಗಳಿಗೆ ಮಾಹಿತಿಯೊಂದಿಗೆ ಹಾಜರಾಗುವುದು. ನಿರ್ದೇಶಕರು/ ಮೇಲಾಧಿಕಾರಿಗಳು ಸೂಚಿಸುವ ಇತರೆ ಎಲ್ಲಾ ಕರ್ತವ್ಯಗಳು.<br>2. ನ್ಯಾಯಾಲಯದ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಸೃಜಿಸಲಾಗುತ್ತಿರುವ Court Case Monitaring System ಗೆ ಸಂಬಂಧಿಸಿದಂತೆ ಮೇಲ್ವಿಚಾರಣೆ ಹಾಗೂ ಸಿಬ್ಬಂದಿ ವಿಭಾಗದ ವಿಷಯ ನಿರ್ವಾಹಕರೊಂದಿಗೆ ಸಮನ್ವಯ.<br>3. E-Hospital ತಂತ್ರಾಂಶ ಅನುಷ್ಠಾನ ಹಾಗೂ ನಿರ್ವಹಣೆ<br>4. State Nodal Officer for HMIS (Health Management Information System) GIS (GEO Information System) ನಿರ್ವಹಣೆ ಮತ್ತು Website Update<br>5. IEC/NHM ಗೆ ಸಂಬಂಧಿಸಿದ ವಿಷಯಗಳ ಸಮನ್ವಯ<br>6. Statistics and Data collection for Annual reposts preparation.<br>7. E-attendance, Radio Programmes, ABDM (Ayushman Bharath Digital Mission) ಇತ್ಯಾದಿಗಳಿಗೆ ಸಂಬಂಧಿಸಿದ ನಿರ್ವಹಣೆಗಳು.<br><br>**ವೇತನದ ವಿವರ:-**<br><br>ಎನ್.ಎಚ್.ಎಮ್ ಆಯುಷ್ ವಿಭಾಗದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಯಕ್ರಮ ಅಧಿಕಾರಿಗಳು ಪಡೆಯುತ್ತಿರುವ ವೇತನವು ಈ ಕೆಳಕಂಡಂತಿರುತ್ತದೆ.<br><br>ವೇತನವು ರೂ. 1,37,700/- , ತುಟ್ಟಿ ಭತ್ಯೆ ರೂ. 14,803/-, |

| | | |
|---|---|---|
| | | ಮನೆ ಬಾಡಿಗೆ ಭತ್ಯೆ ರೂ. 27,540/-, ಸಿ.ಸಿ.ಎ ರೂ. 900/-, ವಿಶೇಷ ಭತ್ಯೆ (ಆಯುಷ್) ರೂ. 44,800/-, ಗಳಾಗಿರುತ್ತದೆ. |
| ಈ) | ಆಯುಷ್ ಇಲಾಖೆಯಲ್ಲಿ ಖಾಯಂ ವೈದ್ಯರು ಹಾಗೂ ಶುಶ್ರೂಷಕರು ಇರುವಂತೆ **13** ಪಂಚಕರ್ಮ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ನಾತಕೋತ್ತರ ವೈದ್ಯರು ಹಾಗೂ ಶುಶ್ರೂಷಕರನ್ನು ಖಾಯಂಗೊಳಿಸಲು ಸರ್ಕಾರ ಅಗತ್ಯ ಕ್ರಮ ವಹಿಸಿದೆಯೇ | ರಾಷ್ಟ್ರೀಯ ಆರೋಗ್ಯ ಅಭಿಯಾನವು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು, ಈ ಯೋಜನೆಯಡಿ ಎಲ್ಲಾ ಹುದ್ದೆಗಳು ತಾತ್ಕಾಲಿಕವಾಗಿರುತ್ತದೆ. ಈ ಹುದ್ದೆಗಳು ಯೋಜನೆಯು ಚಾಲ್ತಿಯಲ್ಲಿರುವವರೆಗೆ ಮಾತ್ರ ಇರುತ್ತವೆ. ಈ ಅಭಿಯಾನದ ಕಾರ್ಯಕ್ರಮಡಿ ಯಾವುದೇ ಹುದ್ದೆಗಳು ಖಾಯಂ ಇರುವುದಿಲ್ಲ. 13 ಪಂಚಕರ್ಮ ಘಟಕಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ನಾತಕೋತ್ತರ ವೈದ್ಯರುಗಳನ್ನು ಮತ್ತು ಶುಶ್ರೂಷಕರನ್ನು ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದ್ದು ಪ್ರತಿ ವರ್ಷ ಗುತ್ತಿಗೆ ಅವಧಿಯನ್ನು ಒಂದು ದಿನ ಮೊಟಕುಗೊಳಿಸಿ ಕಾರ್ಯಕ್ಷಮತೆ ತೃಪ್ತಿಕರವೆಂದು ಖಚಿತಪಡಿಕೊಂಡು ಪುನಃ ಮುಂದುವರಿಸಲಾಗುತ್ತದೆ. ಈ ಹುದ್ದೆಗಳು ಸಂಪೂರ್ಣವಾಗಿ ತಾತ್ಕಾಲಿಕ ಹುದ್ದೆಗಳಾಗಿರುವುದರಿಂದ ಈ ಹುದ್ದೆಗಳ ಎದುರು ಕಾರ್ಯನಿರ್ವಹಿಸುತ್ತಿರುವ ಸ್ನಾತಕೋತ್ತರ ವೈದ್ಯರುಗಳನ್ನು ಮತ್ತು ಶುಶ್ರೂಷಕರುಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಖಾಯಂ ಮಾಡಲು ರಾಜ್ಯ ಸರ್ಕಾರದಲ್ಲಿ ಜಾರಿಯಲ್ಲಿರುವ ನಿಯಮಗಳಂತೆ ಖಾಯಂಗೊಳಿಸಲು ಅವಕಾಶವಿರುವುದಿಲ್ಲ. |
| ಉ) | ಪಂಚಕರ್ಮ ಘಟಕಗಳಲ್ಲಿ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಸ್ನಾತಕೋತ್ತರ ವೈದ್ಯರು ಹಾಗೂ ಶುಶ್ರೂಷಕರುಗಳು ಸುಮಾರು **10-15** ವರ್ಷಗಳಿಂದ ಕಡಿಮೆ ವೇತನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮಾನವೀಯತೆ ಮತ್ತು ಸಾಮಾಜಿಕ ಭದ್ರತೆಯ ದೃಷ್ಟಿಯಿಂದ ಇವರುಗಳನ್ನು ಖಾಯಂಗೊಳಿಸಲು ಸರ್ಕಾರ ಈ ಕೂಡಲೇ ಕ್ರಮ ವಹಿಸುವುದೇ? | ಪಂಚಕರ್ಮ ಘಟಕಗಳಲ್ಲಿ ಕಾರ್ಯನಿರ್ಹಿಸುತ್ತಿರುವ ಸ್ನಾತಕೋತ್ತರ ವೈದ್ಯರು ಹಾಗೂ ಶುಶ್ರೂಷಕರು ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಗುತ್ತಿಗೆ ಆದಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ರಾಜ್ಯ ಸರ್ಕಾರದಲ್ಲಿ ಜಾರಿಯಲ್ಲಿರುವ ನಿಯಮಗಳಂತೆ ಖಾಯಂಗೊಳಿಸಲು ಅವಕಾಶವಿರುವುದಿಲ್ಲ. |

**ಸಂಖ್ಯೆ: ಆಕುಕ 82 ಪಿಐಎಂ 2025**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಅನುಬಂಧ-1 | | | | |
|---|---|---|---|---|
| **ರಾಷ್ಟ್ರೀಯ ಆರೋಗ್ಯ ಅಭಿಯಾನದ ಆಯುಷ್ ಕಾರ್ಯಕ್ರಮದಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಮತ್ತು ಪ್ರಸ್ತುತ ವೇತನ ಭತ್ಯೆಯ ವಿವರಗಳು.** | | | | |
| **ಕ್ರಮ ಸಂಖ್ಯೆ:** | **ಪದನಾಮ** | **ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ** | **ವೇತನ ವಿವರ** | **ಷರಾ** |
| 1 | ಆಯುಷ್ ವೈದ್ಯರು | 609 | ರೂ. 46,894 ಇಂದ ರೂ.51,739.50 | ರಾಷ್ಟ್ರೀಯ ಆರೋಗ್ಯ ಅಭಿಯಾನದ ಆಯುಷ್ ಕಾರ್ಯಕ್ರಮದಡಿಯಲ್ಲಿ ಯಾವುದೇ ಖಾಯಂ ಹುದ್ದೆಗಳು ಮಂಜೂರು ಆಗಿರುವುದಿಲ್ಲ. |
| 2 | ಪಂಚಕರ್ಮ ತಜ್ಞ ವೈದ್ಯರು | 22 | ರೂ. 46,894 ಇಂದ ರೂ.50,279.00 | |
| 3 | ಪಂಚಕರ್ಮ ಶುಶ್ರೂಷಕರು | 25 | ರೂ.16,332.39 ಇಂದ ರೂ.19,649.77 | |
| 4 | ಪಂಚಕರ್ಮ ಥೆರಪಿಸ್ಟ್ | 21 | ರೂ.15,554.66 ಇಂದ ರೂ.20,478.38 | |
| 5 | ಯೋಗ ಮತ್ತು ನ್ಯಾಚ್ ರೋಪತಿ ವೈದ್ಯರು (ಪಿಪಿಪಿ ಮಾದರಿ) | 10 | ರೂ. 46,894 | |
| 6 | ಯೋಗ ಮತ್ತು ನ್ಯಾಚ್ ರೋಪತಿ ಥೆರಪಿಸ್ಟ್ (ಪಿಪಿಪಿ ಮಾದರಿ) | 20 | ರೂ. 14,186.96 ಇಂದ ರೂ. 16252.68 | |
| 7 | ಆಯುಷ್ ಕಾರ್ಯಕ್ರಮ ವ್ಯವಸ್ಥಾಪಕರು | 1 | ರೂ. 36,750 | |
| **ಒಟ್ಟು** | | **708** | | |

| ಅನುಬಂಧ-2 | | | | |
|---|---|---|---|---|
| ರಾಷ್ಟ್ರೀಯ ಆರೋಗ್ಯ ಅಭಿಯಾನದ ಆಯುಷ್ ಕಾರ್ಯಕ್ರಮದಡಿ ಕಳೆದ 3 ವರ್ಷಗಳಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ದೊರೆತಿರುವ ಅನುದಾನದ ವಿವರ. | | | | |
| ಕ್ರಮ ಸಂಖ್ಯೆ | ವಿವರ | 2021-22 ಸಾಲಿನಲ್ಲಿ ಅನುಮೋದನೆಯಾದ ಮೊತ್ತ ರೂ. ಲಕ್ಷಗಳಲ್ಲಿ | 2022-23 ಸಾಲಿನಲ್ಲಿ ಅನುಮೋದನೆಯಾದ ಮೊತ್ತ ರೂ. ಲಕ್ಷಗಳಲ್ಲಿ | 20223-24 ಸಾಲಿನಲ್ಲಿ ಅನುಮೋದನೆಯಾದ ಮೊತ್ತ ರೂ. ಲಕ್ಷಗಳಲ್ಲಿ |
| 1. | ಮಾನವ ಸಂಪನ್ಮೂಲ | 2350.78 | 2572.35 | 4687.17 |
| 2. | ಐ.ಇ.ಸಿ | 32 | 33.6 | 35.28 |
| 3. | ಆಯುಷ್ ವೈದ್ಯರ ತರಬೇತಿ | 15 | 1.98 | 1.98 |
| 4. | ಆಯುಷ್ ಔಷಧಿ | 408.58 | - | - |
| ಒಟ್ಟು | | 2806.36 | 2607.93 | 4724.43 |